# ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.1354/2021

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ರಮೇಶ್. ಪಿ ಎಸ್ | CW: 2 | PW: 4 |
| ತಂದೆಯ ಹೆಸರು | : | ಸಿದ್ಧಲಿಂಗಪ್ಪ | | |
| ವಯಸ್ಸು | : | 35 | | |
| ವೃತ್ತಿ | : | ಪಿಎಸ್ಐ | | |
| ವಾಸಸ್ಥಳ | : | ರಟ್ಟೆಹಳ್ಳಿ | | |

ದಿನಾಂಕಃ 05.11.2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ–

ನಾನು ದಿಃ 18.11.2020 ರಿಂದ ದಿಃ 12.08.2023 ರವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 24.04.2021 ರಂದು ಚಾಸಾ 1 ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ, ನಾನು ಚಾಸಾ 1 ರವರನ್ನು ಸಂಜೆ 4 ಗಂಟೆ ಸಮಯದಲ್ಲಿ ಸವಳಂಗ–ಮಾಚಗೊಂಡನಹಳ್ಳಿ–ಹೊಸಜೋಗ–ಜಯನಗರಕ್ಕೆ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದು ಸಂಜೆ 5 ಗಂಟೆ ಸಮಯದಲ್ಲಿ ಚಾಸಾ 1 ರವರು ಜಯನಗರ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಅಲ್ಲಿನ ಬಾತ್ಮೀದಾರರು ನಾಗರಾಜ ತಂದೆ ಈರಪ್ಪ ಎಂಬುವವರು ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು, ಅದರಂತೆ ಚಾಸಾ 1 ರವರು ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿಯು ವಿಸ್ಕಿ ಮಧ್ಯದ ಪೌಚ್ ಗಳನ್ನು ಸಾರ್ವಜನಿಕರಿಗೆ ಸಾಗಾಟ ಮಾಡುತ್ತಿರುವುದು ಕಂಡು ಬಂದಿದ್ದರಿಂದ ಚಾಸಾ 1 ರವರು ವಾಪಾಸ್

ಠಾಣೆಗೆ 6 ಗಂಟೆಗೆ ಹೋಗಿ ಗಣಕೀಕೃತ ದೂರನ್ನು ತಯಾರಿಸಿ ಚಾಸಾ 13 ರವರಿಗೆ ವರದಿ ನೀಡಿದ್ದು, ಅದರಂತೆ ಚಾಸ 13 ರವರು ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ಸಂಜೆ 6.30 ಗಂಟೆ ಸಮಯದಲ್ಲಿ ನಾನು, ಚಾಸಾ 1 ಮತ್ತು ಚಾಸಾ 7 ರಿಂದ 10 ರವರಿಗೆ ದಾಳಿಗೆ ಹೋಗಲು ಸೂಚಿಸಿ ಚಾ೩ 1 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು ಅದರಂತೆ ಚಾಸಾ 1 ರವರು ಸುರಹೊನ್ನೆ ಸರ್ಕಲ್ ಬಳಿ ಹೋಗಿ ಚಾಸಾ 3 ಮತ್ತು 4 ರವರನ್ನು ಕರೆದುಕೊಂಡು ಠಾಣೆಗೆ ಬಂದಿರುತ್ತಾರೆ. ಚಾಸಾ 3 ಮತ್ತು 4 ರವರಿಗೆ ನಾನು ದಾಳಿ ಬಗ್ಗೆ ಮಾಹಿತಿ ನೀಡಿ ಪಂಚರಾಗಿ ಬರುವಂತೆ ಕೇಳಿಕೊಂಡಿದ್ದು ಅದರಂತೆ ಚಾಸಾ 3 ಮತ್ತು 4 ರವರು ಒಪ್ಪಿಕೊಂಡಿರುತ್ತಾರೆ. ಸಂಜೆ 6.50 ಗಂಟೆಗೆ ನಾನು, ಚಾಸಾ 1, 3, 4, 7 ರಿಂದ 10 ರವರು ಜಯನಗರದ ಗ್ರಾಮಕ್ಕೆ ಇಲಾಖಾ ಜೀಪಿನಲ್ಲಿ ಹೋಗಿ ವೆಂಕಟೇಶಪ್ಪ ಭೋವಿರವರ ಮನೆಯ ಹತ್ತಿರ ಜೀಪನ್ನು ನಿಲ್ಲಿಸಿ ಕೆಳಗೆ ಇಳಿದು ನೋಡಲಾಗಿ ಸಾರ್ವಜನಿಕ ರಸ್ತೆಯಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯು ಸಮಸ್ತದಲ್ಲಿದ್ದ ನಮ್ಮನ್ನು ನೋಡಿ ಹೊಸಜೋಗಕ್ಕೆ ಓಡಿಹೋದ. ನಾವು ಬೆನ್ನಟ್ಟಿದರೂ ಸಹ ಹಿಡಿಯಲು ನಮಗೆ ಆಗಲಿಲ್ಲ. ಓಡಿಹೋದ ವ್ಯಕ್ತಿಯ ಬಗ್ಗೆ ನಾನು ಚಾಸಾ 5 ಮತ್ತು 6 ರವರನ್ನು ವಿಚಾರಿಸಿದಾಗ ಓಡಿಹೋದ ವ್ಯಕ್ತಿಯ ಹೆಸರು ನಾಗರಾಜ ತಂದೆ ಈರಪ್ಪ, ಜಯನಗರ ಗ್ರಾಮ ಎಂದು ಹಾಗೂ ಕಳೆದ 3-4 ದಿನಗಳಿಂದ ಪರವಾನಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿರುತ್ತಾರೆ.

ಸ್ಥಳದಲ್ಲಿದ್ದ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ 90 ಎಂ ಎಲ್ ನ 88 ಪೌಚ್ ಗಳು ಅದರ ಮೇಲೆ ಸ್ಟಿಕ್ಕರ್ ಇರುವುದಿಲ್ಲ ಹಾಗೂ 150 ರೂ.ಗಳನ್ನು ಸದರಿ ವ್ಯಕ್ತಿಯು ಬಿಸಾಡಿ ಹೋಗಿದ್ದು ಅವುಗಳನ್ನು ಪಂಚರ ಸಮಕ್ಷಮ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್. ಎಂ.ಟಿ ಎಂದು ಅರಗು ಸೀಲ್ ಹಾಕಿ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ವಶಪಡಿಸಿಕೊಂಡಿರುತ್ತೇವೆ. ಸಂಜೆ 7.30 ರಿಂದ 8.30 ರ ಸಮಯದಲ್ಲಿ ಪಂಚನಾಮೆ ಜರುಗಿಸಿ, ಪೋಟೋಗಳನ್ನು ತೆಗೆಸಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ 2 ಟ್ರೆಷರಿ ಬಾಕ್ಸ್ ನಲ್ಲಿದ್ದು ಅದರ ಗುರುತಿಸುವಿಕೆಗೆ ಆರೋಪಿ ಪರವಕೀಲರು ತಕರಾರು

ಇಲ್ಲ ಎಂದು ತಿಳಿಸಿರುತ್ತಾರೆ. ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ 2 ಸ್ಥಳ ಪಂಚನಾಮೆ ಮತ್ತು ನಿಪಿ 6 ಕಚ್ಚಾ ನಕಾಶೆಯಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 2(ಡಿ) ಮತ್ತು 6(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 3 ಮತ್ತು 4 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಂ ಕೆ ಹೆಚ್ ವಕೀಲರಿಂದಃ-

ಚಾಸಾ 1, 7 ರಿಂದ 11 ಮತ್ತು 13 ರವರು ನಮ್ಮ ಇಲಾಖೆಯವರು ಎಂದರೆ ಸರಿ. ಮಧ್ಯ ಮಾರಾಟದ ಮಾಹಿತಿ ಚಾಸಾ 1 ರವರಿಗೆ ಯಾವ ಸಮಯಕ್ಕೆ ಬಂದಿರುತ್ತದೆ ಎಂದರೆ ಸಂಜೆ 5 ಗಂಟೆಗೆ. ಚಾಸಾ 1 ರವರು ಮಧ್ಯ ಮಾರಾಟದ ಮಾಹಿತಿ ಬಂದಾಗ ಅವರ ಜೊತೆಯಲ್ಲಿ ಯಾರಿದ್ದರು ಎಂದರೆ ಸಾಕ್ಷಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ. ಕೃತ್ಯ ಸ್ಥಳಕ್ಕೂ ಪೊಲೀಸ್ ಠಾಣೆಗೂ ಎಷ್ಟು ದೂರ ಇದೆ ಎಂದರೆ 25 ಕಿ.ಮೀ. ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಹೋಗಲು ಎಷ್ಟು ಸಮಯ ಬೇಕಾಗುತ್ತದೆ ಎಂದರೆ ಅಂದಾಜು 30 ನಿಮಿಷ ಎಂದು ನುಡಿಯುತ್ತಾರೆ. ಯಾವ ಮಾರ್ಗವಾಗಿ ಠಾಣೆಯಿಂದ ಕೃತ ನಡೆದ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸಾಲಬಾಳು-ಸವಳಂಗ-ಮಾಚಗೊಂಡನಹಳ್ಳಿ-ಚೆನ್ನಿಕಟ್ಟೆ-ಬಿದರಹಳ್ಳಿ-ಸಿದ್ದಾಪುರ-ಹಳೇಜೋಗ-ಹೊಸಜೋಗ-ಜಯನಗರ ಎಂದು ನುಡಿಯುತ್ತಾರೆ. ಪೋಲೀಸ್ ಠಾಣೆ ಮತ್ತು ಜಯನಗರ ಗ್ರಾಮದ ಮಧ್ಯೆ ಮೇಲೆ ಹೇಳಿದ ಹಳ್ಳಿಗಳು ಬರುತ್ತವೆ ಎಂದು ನಿಪಿ 2 ಪಂಚನಾಮೆಯಲ್ಲಿ ಬರೆಸಿಲ್ಲ ಎಂದರೆ ಸರಿ.

ದಾಳಿಗೆ ಹೋಗಿದ್ದವರಲ್ಲಿ ಯಾರು ಮೊದಲು ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಂತಹ ವ್ಯಕ್ತಿಯನ್ನು ನೋಡಿರುತ್ತಾರೆ ಎಂದರೆ ನಾನೇ. ಸದರಿ ವ್ಯಕ್ತಿಯನ್ನು ನಾನು ಎಷ್ಟು ಅಡಿ ದೂರದಿಂದ ನೋಡಿರುತ್ತೇನೆ ಎಂದರೆ ಸಾಕ್ಷಿಯು 200 ಮೀ. ಎಂದು ನುಡಿಯುತ್ತಾರೆ. ಮು.ಮಾ 1 ಮಧ್ಯದ ಪೌಚ್ ಗಳ ತಯಾರಿಸಿದ ಮತ್ತು ಮುಕ್ತಾಯದ ದಿನಾಂಕ, ಯಾವ ರಾಜ್ಯಕ್ಕೆ ಸಂಬಂಧಿಸಿದೆ ಎಂದು ನಿಪಿ 2 ಪಂಚನಾಮೆಯಲ್ಲಿ ತಿಳಿಸಿಲ್ಲ ಎಂದರೆ ಸರಿ. ಆರೋಪಿ ಮಧ್ಯ ಮಾರಾಟ ಮಾಡುತ್ತಿರುವುದನ್ನು ಪೋಟೋ ಆಗಲೀ, ವಿಡಿಯೋ ಆಗಲೀ ತೆಗೆದುಕೊಂಡಿದ್ದೀರಾ ಎಂದರೆ ಇಲ್ಲ. ರಟ್ಟಿನ ಬಾಕ್ಸ್ ನ್ನು

ಮು.ಮಾ ಗಳಲ್ಲಿ ಸೇರಿಸಿಲ್ಲ ಎಂದರೆ ಸರಿ. ಘಟನಾ ದಿನಾಂಕದಂದು ಯಾವ ಯಾವ ಗ್ರಾಮಗಳಲ್ಲಿ ಗಸ್ತು ಮಾಡಿರುತ್ತೇವೆ ಎಂದರೆ ಸಾಕ್ಷಿಯು ಜಯನಗರ ಎಂದು ನುಡಿಯುತ್ತಾರೆ.

ದಿಃ 24.04.2021 ರಂದು ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿ ಇದ್ದಾಗ, ಚಾಸಾ –2 ರವರು ಸಂಜೆ 4 ಗಂಟೆ ಸಮಯದಲ್ಲಿ ಸವಳಂಗ–ಮಾಚಗೊಂಡನಹಳ್ಳಿ– ಹೊಸಜೋಗ–ಜಯನಗರಕ್ಕೆ ಗಸ್ತು ಕರ್ತವ್ಯಕ್ಕೆ ನೇಮಿಸಿದ್ದು ಸಂಜೆ 5 ಗಂಟೆ ಸಮಯದಲ್ಲಿ ನಾನು ಜಯನಗರ ಗ್ರಾಮದಲ್ಲಿ ಗಸ್ತು ಕರ್ತವ್ಯಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಗ ಅಲ್ಲಿನ ಬಾತ್ಮೀದಾರರು ನಾಗರಾಜ ತಂದೆ ಈರಪ್ಪ ಎಂಬುವವರು ಮಧ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದ್ದು, ಅದರಂತೆ ನಾನು ಮರೆಮಾಚಿ ನೋಡಲಾಗಿ ಒಬ್ಬ ವ್ಯಕ್ತಿಯು ವಿಸ್ಕಿ ಮಧ್ಯದ ಪೌಚ್ ಗಳನ್ನು ಸಾರ್ವಜನಿಕರಿಗೆ ಸಾಗಾಟ ಮಾಡುತ್ತಿರುವುದು ಕಂಡು ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು ಘಟನಾ ದಿನಾಂಕದಂದು ದಾಳಿಗೆ ಹೋಗಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪಂಚನಾಮೆ ಜರುಗಿಸಿ ಮು.ಮಾಲನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ಮು.ಮಾಲಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.